ನಂಜುಂಡಪ್ಪ ವರದಿ, ಇದರ ಬಗ್ಗೆ ಬರಿ ಸರ್ಕಾರ ಮಾತನಾಡುತ್ತಿದೆ. ಸರ್ಕಾರದವರು ಘೋಷಣೆ ಮಾಡುತ್ತಿದ್ದಾರೆ. ಮೂಗಿನ ಮೇಲೆ ತುಪ್ಪ ಹಚ್ಚಿದ್ದಾರೆ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಕೂಡ ಆಗಲಿಲ್ಲ. ನಮ್ಮ ಮಾನ್ಯ ವೈಜನಾಥ್ ಪಾಟೀಲ್ ಒಂದೇ ಸಮನೆ ಹೇಳುತ್ತಿದ್ದಾರೆ. ಅವರ ಬಗ್ಗೆ ಕೂಡ ಗಮನ ಕೊಡಲಿಲ್ಲ. ನಂಜುಂಡಪ್ಪ ವರದಿ ಪ್ರಾಮಾಣಿಕವಾಗಿ ಜಾರಿಯಾಗಲಿಲ್ಲ. ಮತ್ತೊಂದು ಕಡೆ ಕೊಡಗು, ಕೊಡವರ ಬಗ್ಗೆ ಕೂಡ ಗಮನ ಇಲ್ಲ. ನಾನು ಹೇಳುತ್ತೇನೆ ಸರ್ಕಾರ ಪ್ರಾಮಾಣಿಕವಾಗಿ ನಂಜುಂಡಪ್ಪ ವರದಿಯನ್ನು ಸಮಗ್ರವಾಗಿ ಜಾರಿ ಮಾಡುವುದಕ್ಕೆ ಕ್ರಮವನ್ನು ಕೈಗೊಳ್ಳಲಿವೆಂದರೆ ಆಂಧ್ರದ ಪರಿಸ್ಥಿತಿ ಇಲ್ಲೂ ಆಗುತ್ತದೆ. ನಾನು ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ತೆಲಂಗಾಣ ಮಾದರಿ ಚಳುವಳಿಯಾಗುತ್ತದೆ. ಎಚ್ಚರಿಕೆ ಕೊಡುತ್ತಿದ್ದೇನೆ. ಆದುದರಿಂದ ಸರ್ಕಾರ ಎಚ್ಚರ ವಹಿಸಿ ಗಂಭೀರವಾಗಿ ನಂಜುಂಡಪ್ಪ ವರದಿಯನ್ನು ಕಾಲಮಿತಿ ಹಾಕಿ ಪ್ರಾಮಾಣಿಕವಾಗಿ ಅದನ್ನು ಮಾಡಬೇಕಾದ್ದು ಕರ್ತವ್ಯವಾಗಿದೆ. ಜೊತೆಗೆ ಕೊಡಗು ಜನರನ್ನು ಸಂಪೂರ್ಣವಾಗಿ ಕಡೆಗಾಣಿಸಿದ್ದಾರೆ. ಕರ್ನಾಟಕದ ಕಾಶ್ಮೀರ ಎಂದು ಹೇಳಿ ಕೂಡ ಕಡೆಗಾಣಿಸಿದ್ದಾರೆ ಎಂದು ಹೇಳಿ ಅವರು ನಿತ್ಯ ನಿರಂತರವಾಗಿ ಹೋರಾಟವನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ತೀವ್ರವಾದಂತಹ ಗಮನವನ್ನು ಕೊಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

4. ಅಧ್ಯಕ್ಷರ ಅಪ್ಪಣೆ ಮೇರೆಗೆ

ಎಂ.ಸಿ.ಎಫ್. ಕಾರ್ಮಿಕರು ಉಪವಾಸ ಮುಷ್ಕರ ನಡೆಸುತ್ತಿರುವ ಬಗ್ಗೆ ಒಂದು ನಿಮಿಷ.

† **ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:** ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಮಾನ್ಯ ಸಿಂಧ್ಯಾರವರು ಇದ್ದಾರೆ. ನಾನು ನಿನ್ನೆ ದಿವಸ ಟಿ.ವಿ.ಯಲ್ಲಿ ನೋಡಿದೆ ಹಾಗೂ ಇವತ್ತು ಪತ್ರಿಕೆಯಲ್ಲಿ ಬಂದಿದೆ. ಎಂಸಿಎಫ್‌ನಲ್ಲಿ ಕಾರ್ಮಿಕರು ಉಪವಾಸ ಮುಷ್ಕರ ಕುಳಿತಿರುವವರಲ್ಲಿ ಮೂರು ಜನ ಸತ್ತಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿದೆ, ಅದರ ಬಗ್ಗೆ ಸ್ವಲ್ಪ ಕ್ರಮ ಕೈಗೊಳ್ಳಬೇಕು. ಮತ್ತು ಆ ಸಮಸ್ಯೆ ಬಗೆಹರಿಸುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮುಖೇನ ಮಾನ್ಯ ಸಿಂಧ್ಯಾರವರನ್ನು ಕೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ(ಕೈಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಮಾನ್ಯ ಸದಸ್ಯರು ಹೇಳಿರುವ ಸಮಸ್ಯೆ ವಿಚಾರದಲ್ಲಿ ಹೇಳುವುದಾದರೆ, ಎಂಸಿಎಫ್ ಮ್ಯಾನೇಜ್‌ಮೆಂಟ್ ಜೊತೆಯಲ್ಲಿ ಮಾತನಾಡಿದ್ದೇನೆ. ನನಗಿಂತ ಹೆಚ್ಚಾಗಿ ನಮ್ಮ ಕಾರ್ಮಿಕ ಸಚಿವರಾಗಿರತಕ್ಕಂಥ ಮಾನ್ಯ ತನ್ವೀರ್ ಸೇಠ್ ಅವರು ಹಲವಾರು ಬಾರಿ ಆಡಳಿತ ಮಂಡಲಿ ಮತ್ತು ಕಾರ್ಮಿಕ ಮುಖಂಡರುಗಳನ್ನು ಕರೆಸಿ ಮಾತುಕತೆಗಳನ್ನು ಮಾಡಿದ್ದಾರೆ. ಆದರೆ ಮಾತುಕತೆಗಳು ವಿಫಲವಾಗಿವೆ. ಆದರೆ ನಾನೂ ಸಹ ನಿನ್ನೆ ನೋಡಿದೆ, ಈಗಾಗಲೇ 2-3 ಜನ ಮುಷ್ಕರ ನಿರತ ಕಾರ್ಮಿಕರು ಸತ್ತಿದ್ದಾರೆ ಎನ್ನುವುದನ್ನು ನೋಡಿದ್ದೇನೆ. ಆದ್ದರಿಂದ ನಾನು ನಾಳೆ ದಿನ ರಾಜ್ಯಕ್ಕೆ ಸಂಬಂಧಪಟ್ಟಂತಹ ವಾಣಿಜ್ಯೋದ್ಯಮಿಗಳ ಸಭೆ ಹೈದರಾಬಾದ್‌ನಲ್ಲಿ ಇರುವುದರಿಂದ ಮಾನ್ಯ ಮುಖ್ಯಮಂತ್ರಿಗಳ ಜೊತೆ ಹೋಗುತ್ತಿದ್ದೇನೆ. ನಾಡಿದ್ದು ನಾನು ಹೈದರಾಬಾದ್‌ನಿಂದ ಬಂದಮೇಲೆ ಆ ಒಂದು ಆಡಳಿತ ಮಂಡಲಿಯ ಮುಖಂಡರುಗಳನ್ನು ಕರೆಸಿ, ಕಾರ್ಮಿಕ ಮುಖಂಡರುಗಳನ್ನು ಸಹ ಕರೆಸಿ ತತ್‌ಕ್ಷಣ ಆ ಸಮಸ್ಯೆಗೆ ಪರಿಹಾರ ಹುಡುಕುವುದಕ್ಕೆ ಕಾರ್ಮಿಕ ಸಚಿವರು ಮತ್ತು ನಾನು ಪ್ರಯತ್ನ ಮಾಡುತ್ತೇವೆ.

ಚೇರ್‌ಮನ್:– ಈಗ ಮಾನ್ಯ ರಾಮಸ್ವಾಮಿಯವರು ಮಾತನಾಡಿ.

---

† ಮಾನ್ಯ ಸದಸ್ಯರಿಂದ ಈ ಭಾಷಣವು ಪರಿಷ್ಕರಿಸಲ್ಪಟ್ಟಿರುತ್ತದೆ.